ಊ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳಿಗೆ ಎರವಲು ಸೇವೆ ಮೇಲೆ ಪಾರಕ್ಕೆ ಮೂರು ಬಾರಿ ಚಿಕಿತ್ಸೆ ನೀಡಲು ಸಮೀಪದ ಕೇಂದ್ರಗಳಿಂದ ತಾತ್ಕಾಲಿಕವಾಗಿ ನಿಯೋಜಿಸ ಲಾಗಿದೆ.

541 ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲಾಖಾ ವತಿಯಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ ಒದಗಿಸುವುದು (ತಾಲ್ಲೂಕುವಾರು ನೀಡುವುದು)

ಆ) ಇಲಾಖಾ ಯೋಜನೆಗಳನ್ನು ಜಾರಿಗೊಳಿಸಲು ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿ ಖರ್ಚು ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಯಾವಾಗ ಈ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು :

1) 2008–09ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಸ್ತ್ರೀಶಕ್ತಿ ಭವನ ನಿರ್ಮಿಸುವ ಕಾಮಗಾರಿ ಕೈಗೊಳ್ಳಲಾಗಿದೆ.
2) ಇಲಾಖಾ ವಂತಿಗೆ ಹಾಗೂ ನಬಾರ್ಡ್ ಸಹಾಯಾನುಧನದಿಂದ ಅಂಗನವಾಡಿ ಕಟ್ಟಡಗಳ ನಿರ್ಮಾಣದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲಾಖೆಯ ಮಾರ್ಗಸೂಚಿ ಅನ್ವಯ ತಾಲ್ಲೂಕು ಸ್ತ್ರೀಶಕ್ತಿ ಭವನ ನಿರ್ಮಾಣಕ್ಕಾಗಿ ರೂ.15.00 ಲಕ್ಷಗಳ ಅನುದಾನ ವನ್ನು ಬಿಡುಗಡೆ ಮಾಡಲಾಗಿದೆ. ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲು ಟೆಂಡರ್ ಕರೆಯಲಾಗಿದ್ದು, 2010–11ರಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ಹಾಗೂ ಇಲಾಖೆಯ ಯೋಜನೆಗಳನ್ನು

ಜಾರಿಗೊಳಿಸಲು ಅಗತ್ಯವಿರುವ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತಿದ್ದು, ನಿಗಧಿತ ಗುರಿಯಂತೆ ಖರ್ಚು ಮಾಡಲಾಗುತ್ತಿದೆ.

ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ :

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖಾವತಿಯಿಂದ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ವಿವರ ಹಾಗೂ ವೆಚ್ಚವನ್ನು ಕೆಳಕಂಡಂತೆ ನೀಡಿದೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ	ಆಯವ್ಯಯ ಬಿಡುಗಡೆ	ವೆಚ್ಚ
1	ಎನ್.ಪಿ.ಆರ್.ಪಿ.ಡಿ.	4.14	2.70
2	ಉದ್ಯೋಗ ಮತ್ತು ತರಬೇತಿ	13.00	--
3	ಆಧಾರ	2.80	2.80
4	ಮೆಟಾಮೋನ್	0.10	0.10
5	ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ	3.60	0.87
6	ವಿಶ್ವ ಅಂಗವಿಕಲರ ದಿನಾಚರಣೆ	0.15	0.15

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ :

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವಿತಿಯಿಂದ ಉದ್ಯೋಗಿನಿ, ಆಸರೆ, ಮಹಿಳಾ ತರಬೇತಿ ಯೋಜನೆ ಹಾಗೂ ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆಯಡಿ ಜಿಲ್ಲೆಗೆ ಅನುದಾನವನ್ನು ಪೂರ್ಣವಾಗಿ ಬಿಡುಗಡೆ ಮಾಡಿ ಖರ್ಚು ಮಾಡಲಾಗಿದೆ.

ಅನುಬಂಧ

2008–09ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಇಲಾಖಾ ಅಂಗನವಾಡಿ ಕಟ್ಟಡದ ವಿವರ :

ಕ್ರ ಸಂ.	ತಾಲ್ಲೂಕು	ಅಂಗನವಾಡಿ ಕೇಂದ್ರಗಳ ಸಂಖ್ಯೆ	ಬಿಡುಗಡೆಯಾದ ಅನುದಾನ	ಖರ್ಚು
1	ಬಂಟ್ವಾಳ	3	5.45	5.45
2	ಬೆಳ್ತಂಗಡಿ	3	5.45	5.45
3	ಸುಳ್ಯ	2	3.72	3.72
4	ಪುತ್ತೂರು	2	3.72	3.72
5	ಮಂಗಳೂರು (ಗ್ರಾ)	1	1.95	1.95
	ಒಟ್ಟು		**20.29**	**20.29**

2008–09ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ನಬಾರ್ಡ್ ನೆರವಿನ ಅಂಗನವಾಡಿ ಕಟ್ಟಡದ ವಿವರ :

ಕ್ರ ಸಂ.	ತಾಲ್ಲೂಕು	ಅಂಗನವಾಡಿ ಕೇಂದ್ರಗಳ ಸಂಖ್ಯೆ	ಬಿಡುಗಡೆಯಾದ ಅನುದಾನ	ಖರ್ಚು
1	ಬಂಟ್ವಾಳ	1	3.45	1.50
2	ಬೆಳ್ತಂಗಡಿ	1	3.45	1.70
3	ಸುಳ್ಯ	1	3.45	1.00
4	ಪುತ್ತೂರು	1	3.45	3.11
5	ಮಂಗಳೂರು (ಗ್ರಾ)	1	3.45	0.00
	ಒಟ್ಟು		**17.25**	**7.31**